ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1.ಇಲ್ಲ

2. ಇಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ

3. ಉದ್ಭವಿಸುವುದಿಲ್ಲ.

ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಕುರಿತು

718 (951) ಶ್ರೀ ಕೌಜಲಗಿ ಮಹಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೆ?

ಅ) ಬೆಳಗಾಂಜಿಲ್ಲೆ ಸವದತ್ತಿ ತಾಲ್ಲೂಕಿನ ಹೊಸೂರ ಗ್ರಾಮದಲ್ಲಿ ಸ್ವತಂತ್ರ ಪದವಿ ಪೂರ್ವ ಮಹಾ ವಿದ್ಯಾಲಯ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಿದ್ಯಾರ್ಥಿಗಳ ಅನುಕೂಲತೆಗಾಗಿ ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಹೊಸೂರ ಗ್ರಾಮದಲ್ಲಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಮಹಾ ವಿದ್ಯಾಲಯ (ಇಂಡಿಪೆಂಡೆಂಟ್ ಜೂನಿಯರ್ ಕಾಲೇಜು) ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಸವದತ್ತಿ ತಾಲ್ಲೂಕಿನಲ್ಲಿ ಅಗತ್ಯವಿರುವಷ್ಟು ಸರ್ಕಾರ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಿವೆ. ಇದರಿಂದ ಹೊಸೂರು ಗ್ರಾಮಕ್ಕೆ ಪ್ರತ್ಯೇಕವಾಗಿ ಸರ್ಕಾರಿ ಸ್ವತಂತ್ರ್ಯ ಪದವಿ ಪೂರ್ವ ಕಾಲೇಜಿನ ಅವಶ್ಯಕತೆ ಕಂಡು ಬರುವುದಿಲ್ಲ.

ರಾಜ್ಯದಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವುದು

720 (954) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಈ ವರ್ಷ ಎಷ್ಟು ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಲಾಗಿದೆ?

2. ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವಾಗ ಬೆಳಗಾವ್ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದಲ್ಲಿ ಮತ್ತು ಬೆಳಗಾಂವ್ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲ್ಲೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

1. 17 ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ (ಪಟ್ಟಿ ಲಗತ್ತಿಸಿದೆ)

2. ಸದ್ಯಕ್ಕೆ ಇಲ್ಲ.

ಅನುಬಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 954

2000-2001 ನೇ ಸಾಲಿನಲ್ಲಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳ ವಿವರಗಳ ಪಟ್ಟಿ

ಕ್ರ ಸಂಖ್ಯೆ	ಸರ್ಕಾರಿ ಆದೇಶದ ಸಂಖ್ಯೆ ಮತ್ತು ದಿನಾಂಕ	ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳ ಸ್ಥಳಗಳು
1.	ಸಂ.ಇಡಿ. 51 ಎಸ್ ಇ ಎಸ್ 2000 ದಿನಾಂಕ 24-06-2000	1. ಸರ್ಕಾರಿ ಉರ್ದು ಪ್ರೌಢಶಾಲೆ, ಹಾವೇರಿ ನಗರ, ಹಾವೇರಿ ಜಿಲ್ಲೆ.
2.	ಸಂ.ಇಡಿ 46 ಎಸ್ ಇ ಎಸ್ 2000 ದಿನಾಂಕ:29-07-2000	2. ಸರ್ಕಾರಿ ಪ್ರೌಢಶಾಲೆ, ಕೌಡ್ಲೆ, ಮದ್ದೂರು ತಾ: ಮಂಡ್ಯ ಜಿಲ್ಲೆ.
3.	ಸಂ.ಇಡಿ 47 ಎಸ್ ಇ ಎಸ್ 2000 ದಿನಾಂಕ:04-08-2000	3. ಸರ್ಕಾರಿ ಪ್ರೌಢಶಾಲೆ, ಗುಂಜೂರು, ಬೆಂಗಳೂರು ನಗರ.
4.	ಸಂ.ಇಡಿ 52 ಎಸ್ ಇ ಎಸ್ 2000 ದಿನಾಂಕ: 04-08-2000	4. ಸರ್ಕಾರಿ ಪ್ರೌಢಶಾಲೆ, ಎಣ್ಣೆಹೊಳೆ, ಕಾರ್ಕಳ ತಾ: ಉಡುಪಿ ಜಿಲ್ಲೆ.
5.	ಸಂ.ಇಡಿ 67 ಎಸ್ ಇ ಎಸ್ 2000 ದಿನಾಂಕ: 14-08-2000	5. ಸರ್ಕಾರಿ ಪ್ರೌಢ ಶಾಲೆ, ಕುಂಚೂರು, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ.
		6. ಸರ್ಕಾರಿ ಪ್ರೌಢಶಾಲೆ, ಟಕ್ಕಳಕ್ಕಿ, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ.
		7. ಸರ್ಕಾರಿ ಪ್ರೌಢ ಶಾಲೆ ಮೈಗೂರು, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ.
		8. ಸರ್ಕಾರಿ ಪ್ರೌಢ ಶಾಲೆ ಸೊನ್ನಥವಳೇಶ್ವರ, ಬೀಳಗಿ, ತಾ: ಬಾಗಲಕೋಟೆ ಜಿಲ್ಲೆ.
		9. ಸರ್ಕಾರಿ ಪ್ರೌಢಶಾಲೆ, ಬಾಡಗಿ, ಬೀಳಗಿ ತಾ: ಬಾಗಲಕೋಟೆ ಜಿಲ್ಲೆ.
6.	ಸಂ.ಇಡಿ88 ಎಸ್ ಇ ಎಸ್ 99 ದಿನಾಂಕ: 14- 12-2000	10. ಸರ್ಕಾರಿ ಪ್ರೌಢಶಾಲೆ, ತುಳಸಿಗೇರಿ, ಪುನರ್ ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.
		11. ಸರ್ಕಾರಿ ಪ್ರೌಢಶಾಲೆ, ತಳಗಿಹಾಳ: ಪುನರ್ ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.
		12. ಸರ್ಕಾರಿ ಪ್ರೌಢಶಾಲೆ, ಸೀಮಿಕೆರೆ ಪುನರ್ ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.

13. ಸರ್ಕಾರಿ ಪ್ರೌಢಶಾಲೆ, ಕೋಲೂರು, ಪುನರ್ ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.
14. ಸರ್ಕಾರಿ ಪ್ರೌಢಶಾಲೆ, ಯಡಹಳ್ಳಿ, ಪುನರ್ ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.
15. ಸರ್ಕಾರಿ ಪ್ರೌಢಶಾಲೆ, ಯತ್ನಮ್ಮಟ್ಟಿ, ಪುನರ್‌ವಸತಿ ಕೇಂದ್ರ, ಬಾಗಲಕೋಟೆ ಜಿಲ್ಲೆ.
16. ಸರ್ಕಾರಿ ಪ್ರೌಢಶಾಲೆ, ವಿದ್ಯಾಗಿರಿ, ಪುನರ್ ವಸತಿ ಕೇಂದ್ರ, ಬಾಗಲಕೋಟೆ.
17. ಸರ್ಕಾರಿ ಪ್ರೌಢ ಶಾಲೆ (ಬಾಲಕಿಯರು) ಬೀಳಗಿ, ಬೀಳಗಿ ರಾ. ಬಾಗಲಕೋಟೆ ಜಿಲ್ಲೆ.

ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಡಿಪ್ಲೋಮೋ ಕಾಲೇಜನ್ನು ಪ್ರಾರಂಭಿಸುವುದು.

721(955) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಿಂದಿನ ಸರ್ಕಾರದವರು ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಡಿಪ್ಲೊಮಾ ಕಾಲೇಜನ್ನು ಪ್ರಾರಂಭಿಸಲು ನವದೆಹಲಿಯ ಎ. ಐ. ಸಿ. ಟಿ. ಇ. ಗೆ ಪ್ರಸ್ತಾವನೆಯನ್ನು ಎಂದು ಕಳಿಸಿದ್ದರು.

2) ಹಾಗಿದ್ದಲ್ಲಿ ಎ. ಐ. ಸಿ. ಟಿ. ಇ. ಯ ಒಪ್ಪಿಗೆಯನ್ನು ಪಡೆದು ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಡಿಪ್ಲೊಮಾ ಕಾಲೇಜನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ಹಾಗೂ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು)

1) ಸರ್ಕಾರಿ ಪತ್ರ ಸಂಖ್ಯೆ : ಇಡಿ 205 ಟಿಪಿ ಇ 98, ದಿನಾಂಕ : 18- 12- 98ರಲ್ಲಿ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಎ ಟಿ ಸಿ ಟಿ ಇ ನವದೆಹಲಿಗೆ ಕಳುಹಿಸಿದೆ.

2) ರಾಜ್ಯ ಸರ್ಕಾರವು ಪ್ರಸ್ತಾವನೆಗೆ ಬಗ್ಗೆ ಎ ಐ ಸಿ ಟಿ ಇ ಯ ಅನುಮೋದನೆಗಾಗಿ ಕಾಯಲಾಗಿದೆ. ಅದು ಬಂದ ನಂತರ ಬೆಳವಡಿಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.